# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯಿಂದ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಮತ್ತು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹುತ್ರಿದುರ್ಗ ಹೋಬಳಿಯ ಗ್ರಾಮಗಳ 83 ಕೆರೆಗಳಿಗೆ ಕುಡಿಯುವ ನೀರೊದಗಿಸುವ ಕಾಮಗಾರಿ ಪರಿಷ್ಕೃತ ಅಂದಾಜು-1 ಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

*****

ಓದಲಾಗಿದೆ :-

1. ಸರ್ಕಾರದ ಆದೇಶ ಸಂಖ್ಯೆ:ಜಸಂಇ 45 ಎನ್ ಹೆಚ್ ಪಿ 2013, ದಿನಾಂಕ:28.02.2014.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-7/18/ಭಾಗ-5/2019-20/1228, ದಿನಾಂಕ:23.07.2019.
3. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-7/18/ಭಾಗ-5/2019-20/1698, ದಿನಾಂಕ:07.08.2019.
4. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-7/18/ಭಾಗ-5/2020-21/27, ದಿನಾಂಕ:19.05.2020.
5. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-7/18/ಭಾಗ-5/2020-21/449, ದಿನಾಂಕ:25.06.2020.

ಪ್ರಸ್ತಾವನೆ :-

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ, ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆ ಸರಪಳಿ 192.30 ಕಿ.ಮೀ. ನಿಂದ ನೀರನ್ನು ಎತ್ತಿ ಶ್ರೀರಂಗ ಯೋಜನೆಯನ್ನು ರೂಪಿಸಿ, ಮಾಗಡಿ ತಾಲ್ಲೂಕು ರಾಮನಗರ ಜಿಲ್ಲೆ ಹಾಗೂ ಹುತ್ತರಿದುರ್ಗ ಹೋಬಳಿಯ ಕುಣಿಗಲ್ ತಾಲ್ಲೂಕು ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರುವ 83 ಕೆರೆಗಳಿಗೆ ಕುಡಿಯುವ ನೀರನ್ನು ಹರಿಸುವ ಸಲುವಾಗಿ 843.71 ಎಂ.ಸಿ.ಎಫ್.ಟಿ. ನೀರನ್ನು ಎತ್ತಿ ಒದಗಿಸುವ ರೂ.277.50 ಕೋಟಿಗಳ ಮೊತ್ತದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ:28-02-2014 ರಂದು ನೀಡಲಾಗಿತ್ತು.

2. ಮೇಲೆ ಓದಲಾದ (2),(3),(4) ಮತ್ತು (5) ರ ಪತ್ರಗಳಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರು ಸದರಿ ಯೋಜನೆಯ ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಪಂಪ್‌ಹೌಸ್ ಮತ್ತು ವಿದ್ಯುತ್ ಸಬ್-ಸ್ಟೇಷನ್ ನಿರ್ಮಿಸಲು ಉದ್ದೇಶಿಸಿರುವ ಸ್ಥಳ ಬದಲಾಯಿಸಿದ ಕಾರಣ ರೈಸಿಂಗ್ ಮೇನ್ ಉದ್ದ ಹೆಚ್ಚಾಗಿರುವುದರಿಂದ ಹಾಗೂ ಗ್ರಾವಿಟಿ ಪೈಪ್‌ಲೈನ್‌ಗೆ PSC ಪೈಪ್ ಬದಲಿಗೆ MS ಮತ್ತು DI ಪೈಪ್‌ಗಳನ್ನು ಅಳವಡಿಸಿರುವುದರಿಂದ ಕಾಮಗಾರಿಯ ಮೊತ್ತವು ಟೆಂಡರ್ ಮೊತ್ತಕ್ಕಿಂತ ಹೆಚ್ಚುವರಿಯಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

3. ಮುಂದುವರೆದು, ಕಾಮಗಾರಿಯ Extra Item Rate List (EIRL) ಮತ್ತು Workslip ಪ್ರಸ್ತಾವನೆಗೆ ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯು ದಿನಾಂಕ:05.11.2018 ರಂದು ಜರುಗಿದ ಸಭೆಯಲ್ಲಿ, ಇ.ಎಫ್.ಐ. ಸಮಿತಿ ಹಾಗೂ ಅಂದಾಜು ಪರಿಶೀಲನಾ ಸಮಿತಿಯು ದಿನಾಂಕ:24.05.2019 ರಂದು ಜರುಗಿದ ಸಭೆಯಲ್ಲಿ, ಮತ್ತು ನಿಗಮದ ಮಂಡಳಿಯು ದಿನಾಂಕ:09.07.2019 ರಂದು ಜರುಗಿದ ಸಭೆಯಲ್ಲಿ ಅನುಮೋದನೆ ನೀಡಿವೆ ಎಂದು ವರದಿಸುತ್ತಾ, ಯೋಜನೆಯ

ಕಾಮಗಾರಿಯ ರೂ.450.00 ಕೋಟಿ ಮೊತ್ತದ ಪರಿಷ್ಕೃತ ಅಂದಾಜು-1 ಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕಾನೀನಿನಿ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

4. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

<u>ಸರ್ಕಾರಿ ಆದೇಶ ಸಂಖ್ಯೆ:ಜಸಂಇ 25 ಎನ್ ಹೆಚ್ ಪಿ 2019</u>

<u>ಬೆಂಗಳೂರು, ದಿನಾಂಕ:15.09.2020</u>

ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯಿಂದ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಮತ್ತು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹುತ್ರಿದುರ್ಗ ಹೋಬಳಿಯ ಗ್ರಾಮಗಳ 83 ಕೆರೆಗಳಿಗೆ ಕುಡಿಯುವ ನೀರೊದಗಿಸುವ ಕಾಮಗಾರಿ ರೂ.450.00 ಕೋಟಿ ಮೊತ್ತದ ಪರಿಷ್ಕೃತ ಅಂದಾಜು-1 ಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 43 ಆಕೋ-1/2019, ದಿನಾಂಕ: 04.08.2020 ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ:ಪಿಡಿಎಸ್-ಎಂಸಿಎಂ/11/2019-ಪಿಪಿಡಿ, ದಿನಾಂಕ: 16.09.2019, ರಲ್ಲಿ ನೀಡಿರುವ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/09/2020

(ಮನೋಹರ ವೈ. ರೊಟ್ಟೆ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂ-2)
ಜಲ ಸಂಪನ್ಮೂಲ ಇಲಾಖೆ.

<u>ಇವರಿಗೆ :-</u>

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು.
6. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ: ಸಿ:425/2020, ದಿನಾಂಕ:03.09.2020)
8. ನಿರ್ದೇಶಕರು, ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

++++